OS 184-13
PW1

ದಿನಾಂಕ 01.02.2018 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರಿದ ಪಾಟೀ ಸವಾಲು ಃ ಶ್ರೀ ಜಿ ಎಂ ಬಿ ವಕೀಲರಿಂದಃ

5 ನೇಪ್ರತೀವಾದಿಯು ಪೆರೂರು ಗ್ರಾಮದ ಖಾಯಂ ನಿವಾಸಿ. ಅವರು ವ್ಯಾಜ್ಯದ ಆಸ್ತಿಯಲ್ಲಿ ಹುಟ್ಟಿ ಬೆಳೆದಿರುತ್ತಾರೆ. ಆ ಕುರಿತು ಯಾವುದೆ ದಾಖಲೆ ಇರುವುದಿಲ್ಲ ಸಾಕ್ಷಿ ಮುಂದುವರಿದು ಅವರು ನಮ್ಮ ಕಣ್ಣು ಮುಂದೆ ಹುಟ್ಟಿ ಬೆಳೆದಿರುತ್ತಾರೆ ಎಂದು ನುಡಿಯುತ್ತಾರೆ. 6 ನೇ ಪ್ರತಿವಾದಿಯು ಮಟ್ಟುರು, ಶಿರ್ವ ಗ್ರಾಮದ ಖಾಯಂ ನಿವಾಸಿ ಮತ್ತು ಅವರು ವ್ಯಾಜ್ಯದ ಆಸ್ತಿಯಲ್ಲಿ ಹುಟ್ಟಿ ಬೆಳೆದು ಶೈಕ್ಷಣಿಕ ವಿದ್ಯಾಭ್ಯಾಸವನ್ನು ಮುಗಿಸಿರುತ್ತಾರೆ. ಆ ಕುರಿತು ನನ್ನ ಬಳಿ ಯಾವುದೇ ದಾಖಲೆಗಳು ಇಲ್ಲ. ದಾವಾ ಆಸ್ತಿಯು ಶಿರ್ವಗಾಮಕ್ಕೆ ಸುಮಾರು 2 ರಿಂದ 3 ಕಿ ಮಿ ಅಂತರವಿರಬಹುದು. ಪ್ರತಿವಾದಿ 4 ರಿಂದ 6 ರವರಿಗೆ ಸದ್ರಿ ಶಿರ್ವಗ್ರಾಮದಲ್ಲಿ ಸ್ವಂತ ಮನೆಯಿದೆ. ಪ್ರತಿವಾದಿ 4 ರಿಂದ 6 ರವರು ಗಳು ದಾವಾ ಆಸ್ತಿಯಲ್ಲಿ ಹುಟ್ಟಿ ಬೆಳೆದಿರುವುದಿಲ್ಲ ಮತ್ತು ಶೈಕ್ಷಣಿಕ ವಿದ್ಯಾಭಾಸವನ್ನು ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

7 ನೇ ಪ್ರತಿವಾದಿಯು ಮಟ್ಟಾರು ಗ್ರಾಮದ ತಾಯಿ ಮನೆಯಾದ ಗಂಪ ಮನೆಯಲ್ಲಿ ವಾಸವಿರುತ್ತಾರೆ. ಅವರು ಸಹ ದಾವಾ ಆಸ್ತಿಯಲ್ಲಿ ಹುಟ್ಟಿ ಬೆಳೆದು ಮತ್ತು ಶೈಕ್ಷಣಿಕ ವಿದ್ಯಾಭ್ಯಾಸವನ್ನು ಮುಗಿಸಿರುತ್ತಾರೆ. 8 ಮತ್ತು 9 ನೇ ಪ್ರತಿವಾದಿಯವರು ಶಿರ್ವಗ್ರಾಮದ ಮಟ್ಟಾರುವಿನ ಖಾಯಂ ನಿವಾಸಿಗಳು. 8 ಮತ್ತು 9 ನೇ ಪ್ರತಿವಾದಿಗಳು ದಾವಾ ಆಸ್ತಿಯಲ್ಲಿ ಹುಟ್ಟಿ ಬೆಳೆದು ಮತ್ತು ಶೈಕ್ಷಣಿಕ ವಿದ್ಯಾಭ್ಯಾಸವನ್ನು ಮುಗಿಸಿರುತ್ತಾರೆ. ಆ ಕುರಿತು 7 ರಿಂದ 9 ನೇ ಪ್ರತಿವಾದಿಗಳು ಹುಟ್ಟಿ ಬೆಳೆದು ಶಾಲೆಗೆ ಹೋದ ಬಗ್ಗೆ ನನ್ನ ಬಳಿ ಯಾವುದೇ ದಾಖಲೆ ಇಲ್ಲ. 7 ರಿಂದ 9 ನೇ ಪ್ರತೀವಾದಿಗಳು ಅವರ ತಾಯಿ

ಮನೆಯಲ್ಲಿ ಒಟ್ಟಿಗೆ ವಾಸವಿದ್ದ ಬಗ್ಗೆ ಸ ದಾಖಲೆಗಳು ಇಲ್ಲ. 7 ರಿಂದ 9 ನೆ ಪ್ರತೀವಾದಿ ಗಳ ತಂದೆ ಚಂದಯ್ಯ ಪೂಜಾರಿ.

ಮುಂದುವರಿದ ಪಾಟೀ ಸವಾಲಿಗೆ ಸಮಯವಕಾಶಕೋರಿದ್ದು ನೀಡಲಾಯಿತು.

ನನ್ನ ಉಕ್ತಲೇಖನಾ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

ಎ.ಹೆ.ಸಿ.ನ್ಯಾ ಮತ್ತು ಪ್ರ ದ ನ್ಯಾ ದಂ,
ಕಾರ್ಕಳ.